Regd No M 1299 SATYAVADI Founded 1917

The Oldest Newspaper of Mysore

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು

ಸಂಪುಟ 32 ಸಂಚಿಕೆ 17 | ಮಂಗಳವಾರ 28—9—48 | ಬಿಡಿ ಪ್ರತಿ 3 ಪೈ

ರಷ್ಯಾ ವಿಶ್ವ ಸಂಸ್ಥೆ ಬಿಡುವುದೇ ?

ವಾರ್ತೆಗಳು

ನವದೆಹಲಿ ಸೆ 27— ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ ಪಿ ವೆನ್ನರು ನಿಜಾಮರಿಂದ ಎರಡು ಮುಖ್ಯವಾದ ಪತ್ರಗಳನ್ನು ತಂದಿದ್ದಾರೆ. ಒಂದು ಭದ್ರತಾ ಸಮಿತಿಯಿಂದ ದೂರನ್ನು ವಾಪಸ್ಸು ತೆಗೆದುಕೊಳ್ಳುವ ವಿಚಾರಕ್ಕೆ ಸಂಬಂಧಿಸಿದ್ದು ವಿದೇಶಗಳಲ್ಲಿರುವ ಹೈದರಾಬಾದಿನ ಏಜೆಂಟರಿಗೆ ಒಂದು ಕಾಸನ್ನೂ ನಿಜಾಮರ ಅಥವಾ ಹೈದರಾಬಾದಿಡ ಲೆಕ್ಕದಲ್ಲಿ ಕೊಡಬಾರದೆಂದು ವಿದೇಶಗಳ ಬ್ಯಾಂಕುಗಳಿಗೆ ಸೂಚನೆ ಕೊಟ್ಟಿರುವದು : ಇನ್ನೊಂದು ಪತ್ರ ಈ ತತ್ವದ ರೀತ್ಯಾ ಭದ್ರತಾ ಸಮಿತಿಗೆ ಹೋಗಿರುವ ನಿಜಾಂ ಪ್ರತಿನಿಧಿಗಳು ತಮ್ಮ ಖರ್ಚನ್ನು ತಾವೇ ವಹಿಸಿಕೊಳ್ಳಬೇಕಾಗಿದೆ.

ಂ ಂ

ರೋಡ್ಸ್.... ಅರಬ್ಬರು ಯಹೂದ್ಯರನ್ನು ದೂರಪ್ರಾಚ್ಯದಿಂದಲೇ ಓಡಿಸುವದಾಗಿ ಬೆದರಿಸುತ್ತಿದಾರೆ.

ಂ

ಮದರಾಸು .... ಪರ್ಮಿಟ್ ಹೊಂದಿರುವವರಿಗೆಲ್ಲಾ ಸೆರಕಾಂವೇ ವಿದೇಶೀ ಸಾರಾಯನ್ನು ಹಂಚುವದು.

ಂ ಂ

ಮೈಸೂರು ಸೆ 27 .... ರಾಜಧಾನಿಯಲ್ಲಿ ಪ್ರದಸರಾ ಸಂಬಂಧದಲ್ಲಿ ಎಲ್ಲಾ ಕಾರ್ಯಕ್ರಮಗಳೂ ನಡೆಯುತ್ತವೆಂದೂ ಆದರೆ ಜಂಬೂ ಸವಾರಿ ಮಾತ್ರವಿಲ್ಲವೆಂದೂ ತಿಳಿಯಬಂದಿದೆ

ಸಂಖ್ಯಾಕರುಗಳೆಂಬ ಭಾವನೆಯಿಂದ ಚರ್ಚೆ ಬರುಗಬೇಕು, ಎಂದು ಅಧ್ಯಕ್ಷರು ಶ್ರೀ ಪುಟ್ಟಸ್ವಾಮಿಯವರ ಕ್ರಿಯಾಲೋಪ ಕುರಿತು ಅಪ್ಪಣೆ ಇತ್ತರು,

ಶ್ರೀ ಕೆ. ಎಂ. ಇನಾಂ—

ಸಂಸ್ಥಾನದಲ್ಲಿ ಜಂಟೀ ಚುನಾವಣೆ ಇರಬೇಕು (ಕರತಾಡನ) : ಜಂಟೀ ಚುನಾವಣಾ ಪದ್ಧತಿ ರಾಷ್ಟ್ರೋದ್ಧಾರಕಾರಿ ; ಪ್ರತ್ಯೇಕ ಚುನಾವಣೆ ಜನತಾಂಗಕ್ಕೆ ಈ ಯುಗದಲ್ಲಿ ಆತ್ಮಹತ್ಯಕಾರಿ :

ವುಡ್ ಲ್ಯಾಂಡ್ಸ್

24—9—48ರಿಂದ

ಸ್ವರ್ಣಲತಾ, ಸಾಜಿದ್, ಇಸ್ಮೈಲ್

ಪಾತ್ರವಹಿಸಿರುವ

ವಾಮಿಕ್ ಅಜ್ರ

(ಅಮೋಘ ಹಿಂದಿ ಚಿತ್ರ)

(ಪ್ರತಿ ದಿನ 3 ಪ್ರದರ್ಶನಗಳು)

ರಾಜ್ಯಾಂಗ ಸಭೆ—

(ಸ್ವಂ. ಸು) ಬೆಂಗಳೂರು ಸೆ 27

ಪ್ರತ್ಯೇಕ ಚುನಾವಣೆ ಕೂಡದು

ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯಾಂಗ ಸಭೆಯ 4 ನೇ ಅಧಿವೇಶನವು ಈ ದಿನದಿಂದ ಪ್ರಾರಂಭವಾಯಿತು.

ಶ್ರೀ ಡಿ. ವಿ. ಗುಂಡಪ್ಪನವರು ಮುಖ್ಯ ತತ್ವ ಸಮಿತಿಗೆ ರಾಜೀನಾಮೆ ಇತ್ತ ಪ್ರಯುಕ್ತ ಆ ಸಮಿತಿಯ ಸದಸ್ಯ ಸ್ಥಾನದ ಚುನಾವಣೆ ನಾಳೇ ದಿವಸ ಜರುಗುವುದೆಂದು ಅಧ್ಯಕ್ಷರು ತಿಳಿಸಿದರು.

ತಿದ್ದುಪಡಿ ಮಾಡಲ್ಪಟ್ಟಿರುವ ಆಯ ವ್ಯಯ ಪಟ್ಟಿ ಅವಿರೋಧ ಮಂಜೂರಾಯಿತು.

ಪ್ರಧಾನಿ ಶ್ರೀ ಕೆ ಸಿ ರೆಡ್ಡಿ ಅಲ್ಪ ಸಂಖ್ಯಾತ ಸಮಿತಿಯ ವರದಿಯನ್ನು ಸಭೆಯ ಮುಂದಿಟ್ಟರು. ಮೂಲಭೂತ ಹಕ್ಕುಗಳ ವರದಿಯನ್ನು ಸಚಿವ ಶ್ರೀ ದಾಸಪ್ಪನವರು ಮಂಡಿಸಿದರು

ವರದಿಯನ್ನು ಮಂಡಿಸುತ್ತಾ ಶ್ರೀ ರೆಡ್ಡಿಯವರು— ಈಗ ಮಂಡಿಸಿರುವ ವರದಿ ತಾತ್ಕಾಲಿಕವಾದದ್ದು. ಭಾರತ ರಾಜ್ಯಾಂಗ ಘಟನೆಯಿಂದ ನಾವು ಸೂಕ್ತ ಪ್ರಯೋಜನ ಹೊಂದಬೇಕು, ಮೂಲಭೂತ ಸಮಿತಿಯ ಮೇಲೂ ನನ್ನ ಸಮಿತಿ ಹೊಂದಿಕೊಂಡಿದೆ, ಪ್ರತ್ಯೇಕ ಚುನಾವಣಾ ಹಕ್ಕಿರಕೂಡದೆಂದು ಅಲ್ಪ ಸಂಖ್ಯಾತ ಸಮಿತಿ ತೀರ್ಮಾನಿಸಿದೆ ; ಜಂಟೀ ಚುನಾವಣೆ ಕ್ಷೇತ್ರವೇ ಜನಯಲ್ಲಿ ಸಂಘಟನಾಕಾರಿ ; ಶಾಸನ ಸಭೆಗಳಲ್ಲಿ ಹಿನ್ನುವರ್ಗ, ಮಹಮದೀಯರು ಮತ್ತು ಕ್ರಿಸ್ತಾನರುಗಳಿಗೆ ಹತ್ತು ವರ್ಷಗಳ ಅವಧಿಗೆ ಮಾತ್ರ ಸ್ಥಾನಗಳನ್ನು ವಿಂಗಡಿಸಲಾಗಿಡಲಾಗುವುದು ಮುಂತಾಗಿ ತಿಳಿಸಿದರು.

— ಚರ್ಚೆ —

ಶ್ರೀ ಎ. ಜಿ. ರಾಮಚಂದ್ರರಾವ್—

ಧಾರ್ಮಿಕ ಅಲ್ಪ ಸಂಖ್ಯಾತ ಮತ್ತು ಸಾಂಸ್ಕೃತಿಕ ಅಲ್ಪಸಂಖ್ಯಾತ ಎಂದು ಎರಡು ವಿಧದ ಅಭಿಪ್ರಾಯಗಳನ್ನು ಈ ವರದಿಯಲ್ಲಿ ಕಾಣಬಹುದು. ನಾವು ಘಟಿಸುವ ರಾಜ್ಯಾಂಗ ಚಿರ ಶಾಶ್ವತ. ಮಂತ್ರಿಮಂಡಲ ರಚನೆಯಲ್ಲಿ ಅಲ್ಪ ಸಂಖ್ಯಾಕರ ವಿಷಯ ತರುವುದು ಸೂಕ್ತವಲ್ಲ. ದೇಶದ ಜನತೆಯು ಬೆಂಬಲ ಗಳಿಸಿದ ಪ್ರಯತ್ನ ಮಾಡತಕ್ಕಂಥ ಮಂತ್ರಿಮಂಡಲ ರಚಿಸುವ ಮುಖಂಡರಿಗೆ ಆ ವಿಷಯವನ್ನು ಬಿಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನರ ನೇಮಕ ಮಂತ್ರಿಮಂಡಲ ಅಧಿಕಾರ ಎಟ್ಟಕೊಳ್ಳಕೂಡಕೂಡದು. ಪಬ್ಲಿಕ್ ಸರ್ವಿಸ್ ಕಮಿಷನ್ ನ್ಯಾಯಾಂಗದಂತೆಯೇ ಸ್ವತಂತ್ರವಾಗಿರಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಕೋಮು ಭಾವನೆ ಕೂಡಲೇ ನಿರ್ಮೂಲವಾಗಬೇಕು ಎಂಬುದೇ ನನ್ನ ಮತ ಸೇನಾಖಾತೆ ವೈದ್ಯಖಾತೆ ವಿದ್ಯಾಖಾತೆ (ಶ್ರೀ ಸಿ. ಆರ್. ರೆಡ್ಡಿ ಉಪಾಧ್ಯಾಯ ಖಾತೆಯಲ್ಲಿ ಕೋಮು ವಾರು ಭಾವನೆ ಕೂಡಬೆಂದಿದ್ದಾರೆ) ಇವುಗಳಲ್ಲಿ ಬ್ರಾಹ್ಮಣ್ಯ ಬ್ರಾಹ್ಮಣೇತರ ಭೇದದ ಅಗತ್ಯವಿಲ್ಲ.

ಮಹಮದೀಯರು ನಿಮ್ನವರ್ಗ ಮತ್ತು ಕ್ರಿಸ್ತಾನರುಗಳು ಮಾತ್ರ ಅಲ್ಪ

ಸುದ್ದಿಗಳು

ಪ್ಯಾರಿಸ್ ಸೆ 27— ರಷ್ಯವು ಬರ್ಲಿನ್ನಿನಲ್ಲಿ ತನ್ನ ವಿಶೇಷ ಅಧಿಕಾರದಿಂದ ಪ್ರಪಂಚ ಶಾಂತಿ ಮತ್ತು ಒಕ್ಕಣೆಗೆ ಧಕ್ಕೆ ತರುತ್ತಿರುವುದೆಂದೂ ತ್ರಿ ಪಾಶ್ಚಾತ್ಯ ರಾಷ್ಟ್ರಗಳು ಆರೋಪಿಸಿವೆ. ವಿಶ್ವ ಸಂಸ್ಥೆ ಮುಂದೆ ವಿಚಾರವನ್ನು ತರಲು ನಿರ್ಧರಿಸಿವೆ. ರಷ್ಯಾ ವಿಶ್ವಸಂಸ್ಥೆ ತ್ಯಜಿಸಬಹುದೆಂದು ಹೇಳಲಾಗಿದೆ

ಂ ಂ

ಲಂಡನ್.... ಏನಾದರೊಂದು ತೀರ್ಮಾನಿತ ಬದಲಾವಣೆ ಒದಗದಿದ್ದರೆ ಇನ್ನೆರಡು ವರ್ಷಗಳಲ್ಲಿ ಯುದ್ಧವು ಖಂಡಿತವೆಂದು ಪಾರ್ಲಿಮೆಂಟು ಸದಸ್ಯ ಬ್ರಿಗ್‌ರವರು ಅಭಿಪ್ರಾಯ ಪಟ್ಟಿರುವರು

ಂ ಂ

ಹಿರಿಯೂರು....ಹಿರಿಯೂರು ತಾಲ್ಲೂಕು ಮಲಪನಹಳ್ಳಿಯ ಜ || ಮಹಿಯುದ್ದೀನ್ ಎಂಬುವರು ಸರ್ಕಾರಿ ಡಿಪೋ ಒಂದರಲ್ಲಿ ಹಣ ದುರುಪಯೋಗ ಮಾಡಿದರೆಂಬ ಆರೋಪಣೆಗಾಗಿ 5 ವರ್ಷ ಕಾಲ ಸರ್ಕಾರಿ ನೌಕರಿಗಳಿಗೆ ಅನರ್ಹರೆಂಬ ಶಿಕ್ಷೆ ಪಡೆದಿದ್ದಾರೆ

ಂ ಂ

ಮೈಸೂರು ಸಂಸ್ಥಾನದಲ್ಲಿ ಅವಿದ್ಯಾವಂತರು ಇನ್ನು ಮೂರು ವರ್ಷಗಳೊಳಗಾಗಿ ವಿದ್ಯಾವಂತರಾಗದಿದ್ದರೆ ಅವರು ಅನಕ್ಷರಸ್ಥ ತಲೆಗಂದಾಯವನ್ನು ಒತ್ತಾಯವಾಗಿ ಕೊಡಬೇಕಾಗುತ್ತದೆಂದು ಒಂದು ನಿರ್ಣಯವನ್ನು ಮೈಸೂರು ವಯಸ್ಕರ ಶಿಕ್ಷಣ ಸಮಿತಿಯು ಸರ್ಕಾರಕ್ಕೆ ಕಳುಹಿಸಿದೆ

At Opera

Song of Bernadette

—featuring —

Jennifer Jones William Eythe

Daily 3 Shows

1—10—48 ರಿಂದ

ಶಂಕರಪಾರ್ವತಿ

Edited, Printed and Published by M S Krishna Rao at the Satyavadi Press, Chamar, Agrahar, Mysore

ಕತೆಗಳು ಕೂಡ ಹೊರುವುದಿಲ್ಲ!

(ಸ್ಥಳ— ಸಾಹುಕಾರರ ಅಂಗಡಿ)

[ಸಾಹುಕಾರರು ಶುದ್ದ ಖದ್ದರು ಧರಿಸಿ ಗಾಂಧೀಯವರ ಪೋ ಟೋ ಎದುರಿನಲ್ಲಿ ನಿಂತುಕೊಂಡು ಎರಡು ಹುವ್ವು. ಇಷ್ಟು ಕುಂಕುಮ ಆ ಚಿತ್ರದ ಮೇಲಿಟ್ಟು ನಮಸ್ಕರಿಸಿ ತಮ್ಮ ಸ್ವಸ್ಥಾನಕ್ಕೆ ಬಂದು ಕುಳಿತುಕೊಂಡು ಭಗವದ್ಗೀತೆಯನ್ನು ಕೈಯಲ್ಲಿ ತೆಗೆದುಕೊಂಡರು)

ಸಾಹುಕಾರರು— 'ಧರ್ಮಕ್ಷೇತ್ರೇ ಕುರುಕ್ಷೇತ್ರೇ .... ,

(ಎನ್ನುತ್ತಾ ಇರುವಾಗಲೇ ರಾಮ ರಾಯರು ಪ್ರವೇಶಿಸಿದರು)

ರಾಮರಾವ್— ಸಾಹುಕಾರರೇ ! ಗುಡ್‌ಮಾರ್ನಿಗ್ ; ಭಗವದ್ಗೀತೆ ಪಾರಾಯಣವನ್ನು ವಿಾಟುತ್ತಿರುವಂತಿದೆ.

ಸಾಹು— (ಹಸುನಗುವಿನೊಂದಿಗೆ) ಹಾದು ಸ್ವಾವಿಾ. ಗಾಂಧಿಮಹಾತ್ಮನು ದಿನಂಪ್ರತಿ ಗೀತಾಪಾರಾಯಣಪ್ರಿಯನಲ್ಲವೇ ? ಆತನ ಅಂತರಾತ್ಮನು ಶಾಂತಿಯನ್ನು ಹೊಂದಬೇಕಾಗಿದ್ದಲ್ಲಿ ಆತನಿಗಾಗಿ ಇದಕ್ಕಿಂತ ಬೇರೆ ಏನು ಮಾಡಬಲ್ಲೆವು ? ನುತದುರಹಂಕಾರಿಯು ಗುಂಡಿನೇಟಿಗೆ ಕೊಸೆಗೆ ತುತ್ತಾದನೀ ಅಂಥಾ ಉತ್ತಮೋತ್ತಮನು (ಎನ್ನುತ್ತಾ ಕಣ್ಣುಗಳಿಂದ ಎರಡು ತೊಟ್ಟು ನೀರು ಸುರಿಸಿದನು)

ರಾಮು— ಸಾಹುಕಾರರೇ ಆತನು ಮಹಾನುಭಾವನೆಂಬ ವಿಷಯವನ್ನು ನೀವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರಪಂಚವೆಲ್ಲಾ ಆತನನ್ನು ಹೊಗಳುತ್ತಿರುವಾಗ ನಿಮ್ಮ ಥಮ್ಮ ಮಾತು ಒಂದು ಲೆಕ್ಕವೇ ! ನಿಮ್ಮ ಎರಡು ಅಶ್ರುಕಣಗಳು ಮಹಾ ಸಮುದ್ರದಲ್ಲಿ ಬಿದ್ದ ಕಾಗೆಯ ಮಲದಂತೆ .... '

ಸಾಹು— ಒಳ್ಳೇ ಮಾತು ಹೇಳಿದ್ರಿ ಸ್ವಾವಿಾ. ನಿನ್ನೊಂದಿಗೆ ಹೇಳಲು ಮರೆತೆ. ನಿನ್ನೆ ಖದ್ದರು ಸಿಲ್ಕು ಅರುಗಜಗಳನ್ನು ಕೊಂಟು ಅವುಗಳ ಮೇಲೆ ಧರ್ಮಚಕ್ರದ ಮುದ್ರೆಗಳನ್ನೊತ್ತಿಸಿ ಸಣ್ಣ ಸಣ್ಣ ತ್ರಿವರ್ಣ ಪತಾಕೆಗಳನ್ನು ತಯಾರ್ಮಾಡಿಸಿ ನಮ್ಮ ಮನೆಯ ಬಾಲಿಗೂ ಅಂಗಡಿಯ ಬಾಗಲಿಗೂ ತೋರಣದಂತೆ ಕಟ್ಟಿಸುತ್ತೇನೆ ಏಕೆಂದರೆ ಅವು ಮಂಗಳಪ್ರದಗಳು.

ರಾಮು— ಬಹಳ ಉತ್ತಮ ಕೆಲಸವನ್ನು ಮಾಡಬೇಕೆಂದಿರುವಿರಿ. ಸರಿ. ಇವತ್ತಿನ ಪೇಪರು ಬಂತೇ ?

ಸಾಹು— ಇನ್ನೂ ಬರಲಿಲ್ಲ ಸ್ವಾವಿಾ (ಎನ್ನುತ್ತಾ ಪತ್ರಿಕೆಯು ಕಾಣದಂತೆ ಮುಚ್ಚಿಡುತ್ತಾನೆ)

ರಾಮು— ಈ ದಿನ ವ್ಯಾಪಾರಸ್ಥರು ಬಹಳ ಕಳವಳದಿಂದಿದ್ದಾರೆ, ಏನೋ ತಿಳಿಯದು. ಈ ಊರನ್ನು ಖಾಲೀ ಮಾಡಲು ಹೇಳಿರುವರೇ ? ಅಥವಾ ಪೇಪರಿನಲ್ಲಿ ಬೇರೆಯಾವುದಾದರೂ ಹೆದರಾಬಾದಿನ ವಿಷಯ ಬಂದಿರುವುದೇ ? ಅದಕ್ಕಾಗಿಯೇ ನಾನು ಪೇಪರು ಬಂದಿದೆಯೇ ಎಂದು ಕೇಳಿದ್ದು.

ಸಾಹು— ಪೇಪರು ಇನ್ನೂ ಬಂದಿಲ್ಲವೆಂದು ಹೇಳಿದೆನಲ್ಲಾ !

ರಾಮು—ಹಾಗಾದರೆ ನಾನೇ ಕೊಂಡುಕೊಂಡು ಬರುತ್ತೇನೆ. ಯಾವುದೋ ಮುಖ್ಯ ವಿಚಾರ ಇದ್ದೇಇರಬೇಕು.

[ಮಿಕ್ಕಿದ್ದು ನಾಳೇ ಪತ್ರಿಕೆಯಲ್ಲಿ



ಬ್ರಿಟಿಷ್ ಜಟ್ ಫೈಟರ್

Save the Cow

ಗೋ ವಧೆ ನಿಲ್ಲಲಿ

SHAKTI SUDHA

A Superb TONIC

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದದು ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿದ ನಮ್ಮಿಂದ ಸ್ಪಷ್ಟಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ¼ ತೋಲಾ, ½ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು